ಶ್ರೀ ಬಿ. ರಾಚಯ್ಯ.—ಮಲೆನಾಡಿನ ಕಡೆ ಒಂದೊಂದು ಊರುಗಳಲ್ಲಿ ಆಷ್ಟು ಸಂಖ್ಯೆ ಸಿಗುವುದಿಲ್ಲ. ಹಿಂದುಳಿದ ವರ್ಗಗಳವರು ಮತ್ತು ಲಂಬಾಣಿಗಳು ಇರುವ ಕಡೆ 300 ಜನರು ಸಿಗುವುದಿಲ್ಲ. ಅದಕ್ಕೋಸ್ಕರ ಆ ಮಿತಿಯನ್ನು ಕಡಿಮೆ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ.

ವಿಷಯ :—ಗಂಗಾವತಿಯಲ್ಲಿ ಕಿರಿಯ ಕಾಲೇಜು ಹಾಗೂ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನೊದಗಿಸುವುದ .

ಪ್ರ. 147(85) ಶ್ರೀ ಹೆಚ್.ಎಸ್. ಮುರಳೀಧರ (ಗಂಗಾವತಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಗಂಗಾವತಿ ನಗರದಲ್ಲಿ ಇರುವ ಸರ್ಕಾರಿ ಕಿರಿಯ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಹೆಚ್ಚು ಬೆಳೆಯುತ್ತಿದ್ದು ಅಲ್ಲಿ ಕೆಲವು ಅನುಕೂಲತೆಗಳ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ, ಈ ವಿದ್ಯಾಲಯದ ಕಟ್ಟಡದಲ್ಲಿ ಪ್ರೌಢಶಾಲೆ ಮತ್ತು ಕಿರಿಯ ಕಾಲೇಜುಗಳ ತರಗತಿಗಳು ಸರದಿಯ ಆಧಾರದ ಮೇಲೆ ನಡೆಯುತ್ತಿದ್ದು ಮತ್ತು ಕಾಲೇಜ್ ವಿಭಾಗದಲ್ಲಿ ವಾಣಿಜ್ಯ ಕಲಾ ವಿಭಾಗ ವಿಜ್ಞಾನ ವಿಭಾಗ ಮತ್ತು ಡಿಪ್ಲೋಮಾ ತರಗತಿಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ. ಈ ವಿದ್ಯಾಲಯದಲ್ಲಿ ಪೀಠೋಪಕರಣಗಳು ಇತ್ಯಾದಿ ಮತ್ತು ವಿಜ್ಞಾನ ವಿಭಾಗದಲ್ಲಿ ಅವಶ್ಯಕ ಸಲಕರಣೆಗಳು, ಗ್ರಂಥಾಲಯ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಈ. ಕೊರತೆಯಿಂದಾಗಿ ಇಲ್ಲಿಯ ವಿದ್ಯಾರ್ಥಿಗಳು ವಿದ್ಯಾರ್ಜನೆಯಲ್ಲಿ ಬಹಳ ತೊಂದರೆಯುಂಟಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ. ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮಗಳಾವುವು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) :—

ಅ. ಬಂತಿದೆ.

ಆ. ಬಂದಿದೆ.

ಇ. ಕೊರತೆ ಇರುವುದು ಗಮನಕ್ಕೆ ಬಂದಿದೆ.

ಈ. ಮತ್ತು ಉ. ಈ ಕೊರತೆಗಳನ್ನು ನಿವಾರಿಸಲು ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

ವಿಷಯ :—ಬೀಜೋತ್ಪತ್ತಿ ಕೇಂದ್ರಗಳು ಉತ್ಪಾದಿಸಿದ ಬೀಜಗಳ ವಿತರಣೆ:

ಪ್ರ. 148 (121) ಶ್ರೀ ಆರ್. ವಿ. ಪಾಟೀಲ್ (ಪರಸಗಡ).—ಮಾನ್ಯ ಕೃಷಿಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ರಾಜ್ಯದಲ್ಲಿ ಬೀಜೋತ್ಪಾದನಾ ಕೇಂದ್ರಗಳು ಕೆಲಸ ಮಾಡುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ ;

ಆ. ಈ ಬೀಜೋತ್ಪಾದನಾ ಕೇಂದ್ರಗಳಲ್ಲಿ ಉತ್ಪತ್ತಿ ಮಾಡಿದ ಬೀಜವನ್ನು ಅಲ್ಲಿಯ ವಿಭಾಗದಲ್ಲಿಯೇ ಹಂಚಲು ವಿಪರ್ಾಟು ಮಾಡಲಾಗುತ್ತಿದೆಯೇ ?

ಶ್ರೀ ಬಿ. ಎಲ್ ಗೌಡ (ಕೃಷಿ ಮಂತ್ರಿಗಳು) :—

ಅ. ಹೌದು.

ಆ. ಇಲ್ಲ.

ಶ್ರೀ ಆರ್. ವಿ. ಪಾಟೀಲ್.—ಬೀಜೋತ್ಪನ್ನ ಕೇಂದ್ರಗಳಲ್ಲಿ ಉತ್ಪಾದನೆ ಆದ ಬೀಜಗಳನ್ನು ಹಂಚಲು ಸರ್ಕಾರ ವಿಪರ್ಾಡು ಮಾಡುತ್ತದೆಯೇ ? ಮಾಡದಿದ್ದರೆ, ಆ ರೀತಿ ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಬಿ.ಎಲ್. ಗೌಡ.—ಆ ವಿವರ ನನ್ನ ಹತ್ತಿರ ಇಲ್ಲ.

ಅಧ್ಯಕ್ಷರು.—ಅಲ್ಲಲ್ಲಿ ಬೆಳೆದುದನ್ನು ಅಲ್ಲಲ್ಲೇ ಹಂಚುವುದಕ್ಕೆ ಏನು ತೊಂದರೆ ಇದೆ ಎನ್ನುತ್ತಾರೆ? ಅದಕ್ಕೆ ವಿವರ ಏನು ಬೇಕಾಗಿಲ್ಲ.

ಶ್ರೀ ಬಿ.ಎಲ್. ಗೌಡ.—ತೊಂದರೆ ಇದೆ. ಏಕೆಂದರೆ, ಬೀಜೋತ್ಪಾದನಾ ಕೇಂದ್ರಗಳಲ್ಲಿ ಉತ್ಪಾದನೆ ಮಾಡಿದ್ದನ್ನು ಅಲ್ಲೇ ನೇರವಾಗಿ ಹಂಚುವುದಿಲ್ಲ. ಅದನ್ನು ನಿಗಮಕ್ಕೆ ಕೊಡಲಾಗುತ್ತದೆ. ನಂತರ ಅದು ಅಲ್ಲಿ ಹಂಚಿಕೆಯಾಗುತ್ತದೆ.

ಶ್ರೀ ಆರ್.ವಿ. ಪಾಟೀಲ್.—ಉತ್ಪಾದನಾ ಕೇಂದ್ರಗಳಲ್ಲಿ ಯಾವ ಯಾವ ರೀತಿಯ ಬೀಜಗಳನ್ನು ಉತ್ಪಾದನೆ ಮಾಡುತ್ತೀರಿ ?

ಶ್ರೀ ಬಿ.ಎಲ್. ಗೌಡ.—ಆ ವಿವರ ಈಗ ನನ್ನ ಹತ್ತಿರ ಇಲ್ಲ.

ವಿಷಯ :—ಬಾದಾಮಿ ತಾಲ್ಲೂಕಿನಲ್ಲಿರುವ ಗ್ರಾಮಗಳಿಗೆ ಕುಡಿಯುವ ನೀರನ್ನೊದಗಿಸುವ ಸೌಲಭ್ಯ.